

ಸಾಂದರ್ಭಿಕ ಚಿತ್ರ

# ಬಾಹ್ಯಾಕಾಶದ ಶಾಂತ ರಾಷ್ಟ್ರ!

**ಹಲಬಗೆಯ ಮಾಲಿನ್ಯಗಳಿಂದ ಭೂಮಿಯನ್ನು ಹದಗೆಡಿಸಿರುವ ಮಾನವ, ಅನ್ಯಗ್ರಹಕ್ಕೆ ಲಗ್ಗೆಯಿಡುವ ಸಾಧ್ಯತೆಗಳ ಅನ್ವೇಷಣೆಯಲ್ಲಿ ತೊಡಗಿದ್ದಾನೆ. ಈ ಪ್ರಯತ್ನ ಯಶ ಕಾಣುವ ಮುನ್ನವೇ ಬಾಹ್ಯಾಕಾಶದಲ್ಲಿ ವರ್ಚುವಲ್ ರಾಷ್ಟ್ರವೊಂದು ರೂಪುಗೊಂಡಿದೆ. ಈ ರಾಷ್ಟ್ರಕ್ಕೆ ನೀವೂ ಪೌರತ್ವ ಪಡೆದುಕೊಳ್ಳಬಹುದು.**

■ ರಾಧಿಕಾ ಎನ್.ಆರ್.

ಭೂಮಿ ಮೇಲೆ ಹೆಚ್ಚುತ್ತಿರುವ ಅಶಾಂತಿ, ಅಸ್ಥಿರತೆಯಿಂದಾಗಿ ಜನರು ನೆಮ್ಮದಿಯಿಂದ ಜೀವಿಸಲು ಆಗದ ಪರಿಸ್ಥಿತಿ ಇದೆ. ಯಾವ ರಾಷ್ಟ್ರಕ್ಕೆ ಹೋದರೂ ಅಲ್ಲಿಯ ಸರ್ಕಾರ, ಸೇನೆಗಳ ನಿಲುವು, ನಿಯಮಗಳಿಗೆ ಬದ್ಧರಾಗಿರಬೇಕು. ಹಲವು ಬಾರಿ ವಿವಿಧ ರಾಷ್ಟ್ರಗಳು ತಮ್ಮ ನಡುವಿನ ಯಾವುದೋ ಕಾಲದ ಸಂಘರ್ಷಗಳಿಂದಾಗಿ ಸಂಬಂಧಗಳನ್ನು ಹಳಸಿಕೊಂಡು ದ್ವೇಷದ ಕಿಚ್ಚನ್ನು ಉರಿಸುತ್ತಲೇ ಇರುತ್ತವೆ. ಈ ಯಾವ ಸಂಘರ್ಷಗಳ ಗೊಡವೆಯಿಲ್ಲದ, ಜನರು ಶಾಂತಿಯಿಂದ ಜೀವಿಸಲು ಅನುವು ಮಾಡಿಕೊಡುವ ರಾಷ್ಟ್ರವೊಂದು ಅಸ್ತಿತ್ವಕ್ಕೆ ಬಂದರೆ ಹೇಗಿರಬಹುದು? ಹ್ಲಾಂ, ಇದು ಊಹೆಯಲ್ಲ. ವಾಸ್ತವ. ವಾಸ್ತವವೆಂದರೆ ವಾಸ್ತವವೂ ಅಲ್ಲ; ವರ್ಚುವಲ್ ರಾಷ್ಟ್ರ! ಇಂಥದ್ದೊಂದು ರಾಷ್ಟ್ರ ಈಗಾಗಲೇ ರೂಪುಗೊಂಡಿದೆ. ಅಂದಹಾಗೆ ಇದು ಇರುವುದು ಭೂಮಿಯ ಮೇಲಲ್ಲ; ಬಾಹ್ಯಾಕಾಶದಲ್ಲಿ.ಅದರ ಹೆಸರು ಅಸ್ಗರ್ಡಿಯಾ!

### ಒಳಿತಿನ ಚಿಂತನೆಯಲ್ಲಿ 'ಆಸ್ಗರ್ಡಿಯಾ'

'ಭೂಮಿಯ ಮೇಲೆ ಎಲ್ಲರೂ ಶಾಂತಿಯಿಂದ ಇರಬೇಕು ಹಾಗೂ ಜಾಗತಿಕ ಮಟ್ಟದಲ್ಲಿ ಎಲ್ಲರಿಗೂ ಒಳಿತಾಗಬೇಕು ಎನ್ನುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ವ್ಯಕ್ತಿಗತ ಅಭಿವೃದ್ಧಿ ಹಾಗೂ ನಿರ್ದಿಷ್ಟವಾಗಿ ಒಂದು ರಾಷ್ಟ್ರದ ಸಮೃದ್ಧಿಯ ಸೀಮಿತ ಉದ್ದೇಶಗಳನ್ನು ಮೀರಿ, ಇಡೀ ಮನುಕುಲಕ್ಕೆ ಒಳಿತಾಗುವ ಹಾಗೆ ಸೇವೆ ಸಲ್ಲಿಸುವುದು ನಮ್ಮ ಗುರಿ' ಎನ್ನುವುದು 'ಆಸ್ಗರ್ಡಿಯಾ ಬಾಹ್ಯಾಕಾಶ ರಾಷ್ಟ್ರ'ದ

### ಟೈಮ್‌ಲೈನ್

- **12** ಅಕ್ಟೋಬರ್ **2016**: ಪ್ಯಾರಿಸ್‌ನ ರಿಟ್ಜ್ ಹೊಟೆಲ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಮೊದಲ ಬಾಹ್ಯಾಕಾಶ ರಾಷ್ಟ್ರ ನಿರ್ಮಾಣ ಘೋಷಣೆ.
- **6** ಮಾರ್ಚ್ **2017**: ಕ್ಯಾಲೆಂಡರ್ ಘೋಷಣೆ– ಆಸ್ಗರ್ಡಿಯನ್ ಕ್ಯಾಲೆಂಡರ್ ಪ್ರಕಾರ ಪ್ರತಿ ತಿಂಗಳಿಗೆ 28 ದಿನ; ವರ್ಷಕ್ಕೆ **13** ತಿಂಗಳು.
- **18** ಜೂನ್ **2017**: ಸಂವಿಧಾನ ಪ್ರಸ್ತಾಪ
- **9** ಸೆಪ್ಟೆಂಬರ್ **2017**: ಸಂವಿಧಾನ ಅಂಗೀಕಾರ
- **12** ನವೆಂಬರ್ **2017**: ಮೊದಲ ಉಪಗ್ರಹ 'ಆಸ್ಗರ್ಡಿಯಾ–1' ಅಮೆರಿಕದ ವರ್ಜಿನಿಯಾದ ವಾಲಪ್ಸ್ ಫ್ಲೈಟ್‌ನಿಂದ ಉಡಾವಣೆ
- **7** ಡಿಸೆಂಬರ್ **2017**: ಕಕ್ಷೆ ಸೇರಿದ ಉಪಗ್ರಹ
- **1** ಫೆಬ್ರುವರಿ **2018**: ಮೊದಲ ಸಂಸದೀಯ ಚುನಾವಣೆ
- **24** ಜೂನ್ **2018**: ವಿಯೆನ್ನಾದಲ್ಲಿ ಮೊದಲ ಸಂಸತ್ ಅಧಿವೇಶನ, ಸುಪ್ರೀಂ ನ್ಯಾಯಮೂರ್ತಿ ನೇಮಕ
- **10-12** ಅಕ್ಟೋಬರ್ **2018**: ಸಂಸತ್ತಿನ ಮೊದಲ ಡಿಜಿಟಲ್ ಅಧಿವೇಶನ
- **12** ಅಕ್ಟೋಬರ್ **2018**: **2**ನೇ ವರ್ಷ ಪೂರ್ಣಗೊಳಿಸಿದ ಬಾಹ್ಯಾಕಾಶ ರಾಷ್ಟ್ರ